# ಮಹಾಸತಿ ಆಚರಣೆ ಮತ್ತು ಜನಪದ ನಂಬಿಕೆಗಳು

**ಚಂದ್ರಶೇಖರ್ ಜಿ.**

ಸಹಾಯಕ ಪ್ರಾಧ್ಯಾಪಕರು, ಮಾನವಿಕ ಮತ್ತು ಸಮಾಜವಿಜ್ಞಾನಗಳ ವಿಭಾಗ, ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯ, ಬೆಂಗಳೂರು.

DOI: https://doi.org/10.5281/zenodo.18785122

**ABSTRACT:**

ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಮಹಾಸತಿ ಆಚರಣೆಯು ಒಂದು ಸಂಕೀರ್ಣ ಸಾಮಾಜಿಕ ಪದ್ಧತಿಯಾಗಿದೆ. ಶಾಸನಗಳಿಗಿಂತ ಹೆಚ್ಚಾಗಿ ಜನಪದ ಗೀತೆಗಳು ಈ ಆಚರಣೆಯ ಕುರಿತು ಜನಸಾಮಾನ್ಯರಲ್ಲಿದ್ದ ಆತಂಕ ಮತ್ತು ಭಕ್ತಿಭಾವದ ದ್ವಂದ್ವ ನಿಲುವುಗಳನ್ನು ಸ್ಪಷ್ಟವಾಗಿ ಅನಾವರಣಗೊಳಿಸುತ್ತವೆ. ಯುದ್ಧದಲ್ಲಿ ಪತಿಯ ಮರಣದ ನಂತರ ಪತ್ನಿಯು ಸಹಗಮನ ಅಥವಾ ಅನುಗಮನದ ಮೂಲಕ ಪ್ರಾಣತ್ಯಾಗ ಮಾಡುವ ಕ್ರಿಯೆಯು, ಕಾಲಾಂತರದಲ್ಲಿ ಅವಳನ್ನು ಕೇವಲ ಮೃತ ಪತ್ನಿಯಾಗಿರದೆ, ಫಲವಂತಿಕೆ ಮತ್ತು ರಕ್ಷಣೆ ನೀಡುವ ಶಕ್ತಿದೇವತೆಯಾಗಿ ಪರಿವರ್ತಿಸಿದೆ. ಕರ್ನಾಟಕದಲ್ಲಿ ಈ ಪದ್ಧತಿಯು ಕೇವಲ ಮೇಲ್ವರ್ಗಕ್ಕೆ ಸೀಮಿತವಾಗಿರದೆ, ಶೂದ್ರ ಸಮುದಾಯಗಳಲ್ಲಿಯೂ ವ್ಯಾಪಕವಾಗಿತ್ತೆಂಬ ಐತಿಹಾಸಿಕ ಸತ್ಯವನ್ನು ಇಲ್ಲಿ ಗುರುತಿಸಲಾಗಿದೆ. ಪಿತೃಪ್ರಧಾನ ವ್ಯವಸ್ಥೆಯ ಒತ್ತಡದ ನಡುವೆಯೂ, ತ್ಯಾಗದ ಮೂಲಕ ದೈವೀಕರಣಗೊಂಡ ಮಹಿಳೆಯ ಆರಾಧನಾ ಪರಂಪರೆ ಮತ್ತು ಜನಪದ ನಂಬಿಕೆಗಳ ವಿಶಿಷ್ಟತೆಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

**KEYWORDS:**

ಮಹಾಸತಿ ಆಚರಣೆ, ಜನಪದ ಗೀತೆಗಳು, ಮಾಸ್ತಿ ಕಲ್ಲು, ಸಹಗಮನ, ಶಕ್ತಿದೇವತೆ.

ಮನುಷ್ಯನ ಅಥವಾ ಮನುಷ್ಯ ಸಮಾಜದ ಪ್ರತಿಯೊಂದು ಚಟುವಟಿಕೆಗಳ ಅಂದರೆ ಸಂಸ್ಕೃತಿ, ಆಚರಣೆ, ಸಂಪ್ರದಾಯ, ನಂಬಿಕೆಗಳು, ಒಟ್ಟಾರೆ ವರ್ತಮಾನ ಮನುಷ್ಯ ಜೀವನ ವಿಧಾನದ ಮೂಲ ಜನಪದವೇ. ಪ್ರತಿಯೊಂದು ಸಾಮಾಜಿಕ ಆಚರಣೆಯ ಬಗೆಗೆ ನಾವು ತಿಳಿಯ ಹೊರಟಾಗ ನಮಗೆ ದೊರೆಯುವ ಪ್ರಾಥಮಿಕ ಆಕರಗಳೆಂದರೆ ಅದು ಜನಪದ ಸಾಹಿತ್ಯವೇ. ಭಾರತದ ಅಂತೆಯೇ ಕರ್ನಾಟಕದಲ್ಲಿಯೂ ಸಹ ಸಾವಿರಾರು ಮಾಸ್ತಿ ಕಲ್ಲುಗಳು ದೊರೆತಿರುವುದು ಮಹಾಸತಿ ಆಚರಣೆ ಎಷ್ಟು ಗಾಢವಾಗಿತ್ತು ಎಂಬುದಕ್ಕೆ ಸಾಕ್ಷಿಗಳಾಗಿವೆ.

ಮಾಸ್ತಿ ಮರಣ ಆಚರಣೆ ಎರಡು ರೀತಿಯಲ್ಲಿ ನಡೆಯುತ್ತಿದ್ದಿತು. ಅವುಗಳೆಂದರೆ ಒಂದು ಸಹಗಮನ ಅಥವಾ ಸಹಮರಣ; ಅಂದರೆ ಪತಿಯ ಶವದೊಂದಿಗೆ ಸತಿಯು

ಚಿತೆಯನ್ನೇರುವುದು. ಮತ್ತೊಂದು ಅನುಗಮನ ಅಥವಾ ಅನುಮರಣ; ಅಂದರೆ ಗಂಡ ದೂರದ ಸ್ಥಳದಲ್ಲೆಲ್ಲೋ ಮಡಿದಾಗ ಅವನ ಪ್ರಿಯವಸ್ತುವನ್ನು ಹಿಡಿದು ಸತಿಯು ಅಗ್ನಿಯನ್ನು ಪ್ರವೇಶಿಸುವ ಆಚರಣೆ. ಇಲ್ಲಿ ಯಾವ ಆಚರಣೆಯಾದರೂ ಗಂಡ ಯಾವ ರೀತಿಯಲ್ಲಾದರೂ ಮಡಿಯಲಿ, ಸತಿಯಾದವಳು ಚಿತೆಯನ್ನೇರಲೇಬೇಕೆಂಬ ನಿಯಮವನ್ನು ಕಾಣಬಹುದು. ಕ್ರಿ.ಶ 5 ಅಥವಾ 6ನೇ ಶತಮಾನದ ಕವಡಿ ಶಾಸನ ಬಹುಶಃ ಕದಂಬ ರವಿವರ್ಮನ ರಾಣಿಯ ಸಹಗಮನವವನ್ನು ಸೂಚಿಸುತ್ತಿದ್ದು, ನಮ್ಮ ನಾಡಿನ ಮಾಸ್ತಿ ಮರಣ ಪದ್ಧತಿಯನ್ನು ಕುರಿತ ಪ್ರಥಮ ದಾಖಲೆಯಾಗಿದೆ.

ಮಾಸ್ತಿ ಆಚರಣೆಯನ್ನು ಕುರಿತಂತೆ ಶಾಸನಗಳು ನಮಗೆ ಅಧಿಕೃತ ದಾಖಲೆಗಳಾದರೂ ಸಹ, ಆ ಆಚರಣೆಯ ಬಗೆಗೆ ಸಾಮಾನ್ಯ ಜನ ಸಮುದಾಯದಲ್ಲಿದ್ದ ನಂಬಿಕೆ ಮತ್ತು ಅಭಿಪ್ರಾಯಗಳೇನೆಂಬುದನ್ನು ತಿಳಿಯಲು ಕೆಲವೊಂದು ಜನಪದ ಪದ್ಯಗಳನ್ನು ನೋಡಬಹುದಾಗಿದೆ. ಅಂತಹ ಕೆಲವು ಪದ್ಯಗಳು ಅಭಿವ್ಯಕ್ತಿಸಿರುವ ವಿಷಯಗಳ ಮೂಲಕ ಈ ಮಹಾಸತಿ ಆಚರಣೆಯ ಸ್ವರೂಪ ಹಾಗೂ ಸಾಂಸ್ಕೃತಿಕ ವೈಶಿಷ್ಟ್ಯಗಳ ಒಳನೋಟಗಳನ್ನು ಅರಿಯುವುದು ಈ ಪ್ರಬಂಧದ ಮುಖ್ಯ ಉದ್ದೇಶವಾಗಿದೆ.

ಮಹಾಸತಿ ಆಚರಣೆಯನ್ನು ಕುರಿತಂತೆ ಇರುವ ಜನಪದ ಗೀತೆಗಳು ಒಂದು ಕಡೆ ಆಚರಣೆಯ ರೀತಿ ನೀತಿಗಳನ್ನು ವಿರೋಧಿಸಿದರೆ, ಮತ್ತೊಂದು ಕಡೆ ಆ ಆಚರಣೆಯನ್ನೇ ವಿರೋಧಿಸುವುದೂ ಉಂಟು. ನಮ್ಮ ಜನಪದರು ಈ ಆಚರಣೆಯನ್ನು ವಿರೋಧಿಸುತ್ತಿದ್ದರೆಂದರೆ ಇದು ಪ್ರಭುತ್ವದಿಂದ ಪೋಷಿಸಲ್ಪಡುತ್ತಿದ್ದ ಆಚರಣೆಯಾಗಿತ್ತೆಂಬುದು ತಿಳಿಯುತ್ತದೆ. ಮಹಾಸತಿ ಆಚರಣೆಯ ಬಗೆಗೆ ಕೆಲವೇ ಕೆಲವು ಜನಪದ ಗೀತೆಗಳು ದೊರೆತಿರುವುದರಿಂದ ಅವುಗಳನ್ನು ಆಧರಿಸಿಯೇ ಈ ಪ್ರಬಂಧವನ್ನು ರಚಿಸಲಾಗುತ್ತಿದೆ. ಈ ಆಚರಣೆಯನ್ನು ಕುರಿತು ಕೆಲವೇ ಕೆಲವು ಜನಪದ ಗೀತೆಗಳು ದೊರೆತಿರುವುದಕ್ಕೆ ಮುಖ್ಯ ಕಾರಣ, ಸಾಮಾನ್ಯವಾಗಿ ಜನಪದ ಗೀತೆಗಳನ್ನು ಹಾಡುವ ಸಂಪ್ರದಾಯ ಮತ್ತು ಹಾಡುಗಾರರ ಸಂಖ್ಯೆ ಕ್ಷೀಣಿಸುತ್ತಿರುವುದೇ ಆಗಿದೆ.

ಈ ಜನಪದ ಗೀತೆಗಳಲ್ಲಿ ಹಲವು ಮಹಾಸತಿ ಆಚರಣೆಯ ಪೂರ್ವ ಘಟನೆಗಳನ್ನು, ನಂತರದ ಘಟನೆಗಳನ್ನು ವಿವರಿಸಿದರೆ ಮತ್ತೆ ಕೆಲವು ಪದ್ಯಗಳು ಈ ಆಚರಣೆಯನ್ನೇ ವಿರೋಧಿಸುವ ಭಾವನೆಯನ್ನು ಅಭಿವ್ಯಕ್ತಿಸಿರುವುದು ಅತ್ಯಂತ ಆಶ್ಚರ್ಯಕರವಾದರೂ ಸತ್ಯ ಸಂಗತಿ. ಯುದ್ಧದಲ್ಲಿ ಹೋರಾಡುವ ವೀರರ ಶೌರ್ಯ–ಪರಾಕ್ರಮಗಳು, ಮದುಮಗಳನ್ನು ಕೇಳಲು ಅವರ ಮನೆಗೆ ಬರುವ ಪ್ರಸಂಗಗಳು, ಮದುವೆಯ ಸಂದರ್ಭದ ವಿವರಗಳು, ಪತಿಯ ಅಥವಾ ವೀರನ ಸಾವಿನ ಸಂದರ್ಭ, ಸತಿಯಾಗುವವಳಿಗಾಗಿ ಮಾಡುವ ಕೊಂಡದ ಸಿದ್ಧತೆ, ಮಹಾಸತಿ ದಹನವಾಗುವ ಪ್ರಕ್ರಿಯೆ, ಇವೆಲ್ಲವನ್ನು ಈ ಪದ್ಯಗಳಲ್ಲಿ ಅನಾವರಣಗೊಳಿಸಿರುವುದರಿಂದ ಮಾಸ್ತಿ

ಆಚರಣೆಯ ಸ್ವರೂಪ ತಿಳಿಯುತ್ತದೆ. ಇದಕ್ಕೆ ಪೂರಕವಾಗಿ ಒಂದು ಜನಪದ ಪದ್ಯ ಹೀಗಿದೆ:

**ಆನೆಮ್ಯಾಲೆ ಬರುವೋರು ಜೋಡ್ಯಾರು ನಾಗಣ್ಣ**
**ಜೋಡೀಲಿ ಕುದುರೆ ಐನೂರು ! ತಿಮ್ಮಣ್ಣನ**
**ಬೇಡ ಬಂದಾರೆ ದೊರಿಗಾಳು![1]**

ಹುಡುಗಿಯನ್ನು ನೋಡಲು ಜೋಡಿದಾರರ ಅಂದರೆ ಶ್ರೀಮಂತರ ಮನೆಯವರು, ಕುದುರೆಗಳ ಮೇಲೆ ಬಹಳ ವೈಭವದಿಂದ ತಿಮ್ಮಣ್ಣನ ಮಗಳನ್ನು ವಧುವಾಗಿ ಕೇಳಲು ಬಂದರೆಂಬುದನ್ನು ಈ ಪದ್ಯವು ತಿಳಿಸಿದರೆ, ಮುಂದಿನ ಪದ್ಯಗಳಲ್ಲಿ ಹೆಣ್ಣನ್ನು ಕೊಡಬೇಕೋ ಬೇಡವೋ ಎಂಬ ಚರ್ಚೆಗಳೂ ಸಹ ನಡೆಯುವುದನ್ನು ಸೂಚಿಸುತ್ತವೆ. ಯುದ್ಧದಲ್ಲಿ ಹೋರಾಡುವ ವೀರರಿಗೆ ಹೆಣ್ಣು ಕೊಟ್ಟರೆ ಆ ವೀರ ಮಡಿದಾಗ ಹೆಣ್ಣು ಸತಿ ಆಚರಣೆಗೆ ಬಲಿಯಾಗಬೇಕಾಗುತ್ತದೆ ಎಂಬ ಅಂಶವೇ ಹೆಣ್ಣು ಕೊಡಬಾರದು ಎನ್ನುವ ಭಾವಕ್ಕೆ ಮುಖ್ಯ ಕಾರಣ.

**ಮಾತನಾಡಿ ದೊಡ್ಡಪ್ನಂದ ಕೊಡಬ್ಯಾಡಿ**
**ಸಂದನೋರ ಮಗ ಕಾಳಗದಾಗ ಮಡುದಾನೆ![2]**

ಇಂದು ಸೈನ್ಯದಲ್ಲಿ ಕೆಲಸ ಮಾಡುವ ಹುಡುಗನಿಗೆ ಹೆಣ್ಣು ಕೊಡುವಾಗ ಹೆಣ್ಣಿನ ಮನೆಯವರು ಆತಂಕ ಪಡುವಂತೆಯೇ ಹಿಂದೆಯೂ ಸಹ ಯುದ್ಧದಲ್ಲಿ ಹೋರಾಡುವ ವೀರರಿಗೆ ಹೆಣ್ಣು ಕೊಡಲು ಹೆಣ್ಣಿನ ಕಡೆಯವರು ಯೋಚಿಸುತ್ತಿದ್ದರೆಂಬುದನ್ನು ನೋಡಿದಾಗ ಸತಿ ಆಚರಣೆ ಅವರಿಗೆ ಇಷ್ಟವಿರಲಿಲ್ಲವೆಂಬುದು ತಿಳಿಯುತ್ತದೆ. ಇವೆಲ್ಲವನ್ನು ನೋಡಿದಾಗ ಹಾಗಾದರೆ ಮಹಾಸತಿ ಆಚರಣೆ ಬಲವಂತವಾಗಿ ನಡೆಯುತ್ತಿತ್ತೆ? ಎಂಬ ಅನುಮಾನವೂ ಮೂಡುತ್ತದೆ.

ಆದರೆ ಪ್ರಭುತ್ವದ ನಿರ್ಧಾರದ ವಿರುದ್ಧ ನಿಲ್ಲಲಾಗದೆ ಆ ಆಚರಣೆಯನ್ನು ಒಪ್ಪಿಕೊಳ್ಳಬೇಕಾದ ಅನಿವಾರ್ಯತೆ ಇತ್ತೆಂಬುದೂ ಸಹ ತಿಳಿಯುತ್ತದೆ. ಗಂಡನನ್ನು ಕಳೆದುಕೊಂಡ ಹೆಣ್ಣು ಸತಿ ಹೋಗುವ ಸಂದರ್ಭದಲ್ಲಿ ಅವಳನ್ನು ಮನಸ್ಸಿಲ್ಲದ ಮನಸ್ಸಿನಿಂದ ಚಿತೆಗೆ ಕಳುಹಿಸಲು ಮಾಡುವ ಕೊಂಡದ ಸಿದ್ಧತೆ, ಆ ಸತಿಯನ್ನು ಸಹಗಮನ ಮಾಡಬೇಡವೆಂದು ಬೇಡಿಕೊಳ್ಳುವ ಬಂಧುಗಳ ಮಾತುಗಳು, ಆದರೂ ಪಾತಿವ್ರತ್ಯದ ಕಾರಣ ಕೊಟ್ಟು ಗಂಡನು ಹೋದೆಡೆ ಹೆಂಡತಿಯೂ ಹೋಗಬೇಕೆಂಬ ಪ್ರಬಲ ಸಂಸ್ಕೃತಿಯ ಒತ್ತಾಯಗಳು ಕೊನೆಗೆ ಅವಳನ್ನು ಕೊಂಡಕ್ಕೆ ಕಳುಹಿಸಿಕೊಡುವ ಅನಿವಾರ್ಯತೆ ಎದುರಾಗುತ್ತದೆ. ಆ ಸಂದರ್ಭವನ್ನು ಸೂಚಿಸುವ ಪದ್ಯಗಳು ಹೀಗಿವೆ:

**ಕೊಂಡಾದಲ್ಲಿರುವ ಕೆಂಡಾದ ಚವಲೀಯ**
**ತಕ್ಕಂಡು ಬಾರೆಣ್ಣೆ ಇದುರೀಗೆ ! ನಾಗವ್ವನ**
**ಗಂಡನ ಮನಿಗೆ ಕಳುವೋನ!**
**ಕಿಚ್ಚಿನ ಸುತ್ತ ನುಚ್ಚಕ್ಕಿ ಹಸೆ ಹುಯ್ದು**

**ಮುತ್ತೀನ ಕಳಸ ನಡುವಿರಿಸಿ! ನಾಗವ್ವನ**
**ಕಿಚ್ಚೀಗೆ ಧಾರೆ ಎರೆದಾರು![3]**

ಹೆಣ್ಣು ತನ್ನ ಪಾತಿವ್ರತ್ಯವನ್ನು ಕಾಪಾಡಿಕೊಳ್ಳಲು ಇರುವ ಏಕೈಕ ಮಾರ್ಗ ಈ ಸತೀ ಆಚರಣೆ ಎಂಬ ಧೋರಣೆ ಜನಸಾಮಾನ್ಯರ ಮೇಲೆ ಹೇರಲ್ಪಟ್ಟಿದ್ದರಿಂದ, ಈ ಕ್ರಿಯೆ ಒಂದು ಆಚರಣೆಯಾಗಿ ಮಾರ್ಪಟ್ಟಿದ್ದಲ್ಲದೆ ಹೆಣ್ಣನ್ನು ಮದುವೆಯಲ್ಲಿ ಧಾರೆ ಎರೆದು ಗಂಡನ ಮನೆಗೆ ಕಳಿಸುವ ರೀತಿಯಲ್ಲಿ ಅಲಂಕಾರ ಮತ್ತು ವೈಭವದಿಂದ ಕೊಂಡಕ್ಕೆ ಕಳಿಸುವ ಪದ್ಧತಿ ಇದ್ದಿತೆಂಬುದು ಈ ಮೇಲಿನ ಪದ್ಯಗಳಿಂದ ತಿಳಿಯುತ್ತದೆ. ಇಲ್ಲಿ ಬೆಂಕಿಗೆ ಹಾರುವ ಕ್ರಿಯೆಯನ್ನು ವೈಭವದಿಂದ ಕೂಡಿದ ಮದುವೆಯೆಂಬಂತೆ ಬಿಂಬಿಸಲಾಗಿದೆ.

ಇಲ್ಲಿಂದ ಮುಂದೆ ಬೆಂಕಿಗೆ ಬಲಿಯಾದ ಹೆಣ್ಣಿನ ಬಗೆಗಿನ ಅಭಿಪ್ರಾಯ ಸಂಪೂರ್ಣವಾಗಿ ಬೇರೆಯದೇ ಸ್ವರೂಪವನ್ನು ಪಡೆಯುತ್ತದೆ. ಅಲ್ಲಿಯವರೆಗೂ ಮನುಷ್ಯಳಾಗಿ, ಪತೀವ್ರತೆಯಾಗಿ, ತ್ಯಾಗ ಮತ್ತು ಬಲಿದಾನಗಳ ಪ್ರತೀಕವಾಗಿ ಕಾಣುತ್ತಿದ್ದ ಅವಳು ಕಾಲಾನಂತರದಲ್ಲಿ ಶಕ್ತಿ ದೇವತೆಯಾಗಿ ಜನಸಾಮಾನ್ಯರಿಂದ ಪೂಜಿಸಲ್ಪಡುತ್ತಾಳಲ್ಲದೆ, ಅವಳು ಯಾವ ಗಂಡನಿಗೋಸ್ಕರ ತನ್ನ ಪ್ರಾಣವನ್ನು ತ್ಯಾಗ ಮಾಡಿರುತ್ತಾಳೋ ಆ ವೀರನನ್ನು ಜನ ಮರೆಯುತ್ತಾರಲ್ಲದೆ ಅವಳನ್ನೇ ಆರಾಧಿಸಲು ಆರಂಭಿಸುತ್ತಾರೆ. ಇದನ್ನು ನಾವು ದೊರೆತಿರುವ ಬಹುಪಾಲು ಮಾಸ್ತಿಕಲ್ಲುಗಳ ಆಧಾರದ ಮೇಲೆ ತಿಳಿಯಬಹುದು. ಈ ಕಲ್ಲುಗಳಲ್ಲಿ ಮಾಸ್ತಿಯೇ ಪ್ರಮುಖವಾದ ಮೂರ್ತಿಯಾಗಿದ್ದು ಗಂಡ ಅಪ್ರಧಾನವಾಗಿ ಗುರುತಿಸಿಕೊಂಡಿರುವುದನ್ನು ನೋಡಬಹುದಾಗಿದೆ.

ಮುಂದೆ ಆ ಮಹಾಸತಿ ಅನೇಕ ವರಗಳನ್ನು ನೀಡುವ ಶಕ್ತಿ ದೇವತೆಯಾಗಿ ಜನ ಸಮಾಜದಲ್ಲಿ ಚಿತ್ರಿತಳಾಗುತ್ತಾಳೆ. ಈ ಮಾತಿಗೆ ಪೂರಕವಾಗಿ ಈ ಪದ್ಯಗಳನ್ನು ಉದಾಹರಿಸಬಹುದು:

**ಲೋಕ ಲೋಕೆಲ್ಲ ಬಂದು ಪೂಜೆಯ ಮಾಡಿ**
**ಈಡಾಡಿ ಬಂದೊ ಈಡುಗಾಯಿ! ನಾಗವ್ಗೆ**
**ಎರಚಾಡಿ ಬಂದೊ ಹಣ್ಣು ಫಲ!!**
**ಕಂದನ ಕೊಡಮ್ಮ ನನಗೊಂದ ನಾಗಮ್ಮ**
**ವಪ್ಪುಳ್ಳ ಹೆಸರ ಕರದೇವೊ ! ನಾಗಮ್ಮ**
**ನಿನಗೆ ವೊಕ್ಕಲು ಆದೇವೊ![4]**

ಸಾಮಾನ್ಯ ಹೆಣ್ಣಾಗಿದ್ದವಳು ಮಹಾಸತಿಯಾದ ನಂತರ ದೈವತ್ವಕ್ಕೆ ಏರುವುದಲ್ಲದೆ ಶಕ್ತಿದೇವತೆಯಂತೆ ಪೂಜಿಸಲ್ಪಡುವುದು ನಮ್ಮ ಜನಪದರ ನಂಬಿಕೆಯಿಂದಲೇ. ಮಕ್ಕಳಿಲ್ಲದವರಿಗೆ ಮಕ್ಕಳನ್ನು ಕರುಣಿಸುವ ಫಲವತ್ತತೆಯ ದೇವತೆಯಾಗಿ, ರೈತರಿಗೆ ಫಲವತ್ತಾದ ಬೆಳೆಗಳನ್ನು ಕೊಡುವ ದೇವತೆಯಾಗಿ, ರೋಗಗಳನ್ನು ನಿವಾರಿಸಿ ಉತ್ತಮ ಆರೋಗ್ಯವನ್ನು ಕರುಣಿಸುವ ದೇವತೆಯಾಗಿ, ಕಷ್ಟಗಳನ್ನು ನಿವಾರಿಸುವ ಶಕ್ತಿಯಾಗಿ ಹೀಗೆ ಅನೇಕ ಫಲಗಳನ್ನು ನೀಡುವ ದೇವತೆಯಂತೆ ಪೂಜೆಗಳ ಮೂಲಕ ಆಚರಿಸಲ್ಪಡುತ್ತಿರುವುದನ್ನು ಇಂದಿಗೂ ಗ್ರಾಮೀಣ ಭಾಗಗಳಲ್ಲಿ ಕಾಣಬಹುದಾಗಿದೆ.

ಮಾಸ್ತಿ ಗೀತೆಗಳ ಆಶಯವೂ ಸಹ ಬೆಳೆ, ಫಲವಂತಿಕೆ, ಆರೋಗ್ಯ, ಆಯಸ್ಸುಗಳ ಸಂವರ್ಧನೆಯೇ ಆಗಿದೆ.

ಮಹಾಸತಿ ಕಲ್ಲುಗಳನ್ನು ಪೂಜಿಸುವ ಪರಿಪಾಠ ಆರಂಭವಾದದ್ದೇ ನಮ್ಮ ಜನಪದರು ತಮಗೆ ಬೇಕಾದ್ದನ್ನು ಪ್ರಾರ್ಥಿಸಲು ಆರಂಭಿಸಿದಾಗಿನಿಂದ. ಕೇಳಿದ್ದೆಲ್ಲವನ್ನು ಮಹಾಸತಿ ಕರುಣಿಸುತ್ತಾಳೆಂಬ ನಂಬಿಕೆಯೇ ಆ ಆಚರಣೆಗೆ ಮೂಲವಾಗಿದೆ. ಮಾಸ್ತಿ ದೇವತೆಗೆ ಕೇವಲ ಪೂಜೆ ಮತ್ತು ಆರಾಧನೆಗಳು ನಡೆಯುವುದಷ್ಟೇ ಅಲ್ಲದೆ ಹರಕೆಗಳನ್ನು ಹೊತ್ತುಕೊಳ್ಳುವ ಉದಾಹರಣೆಗಳನ್ನೂ ಕಂಡಾಗ ನಮ್ಮ ನಾಡಿನ ಜನಪದರ ಮನಸ್ಸಿನಲ್ಲಿ ಮಾಸ್ತಿ ಪ್ರಧಾನ ಶಕ್ತಿ ದೇವತೆಯ ಸ್ವರೂಪವನ್ನೇ ಪಡೆದಿದ್ದಳೆಂಬುದು ತಿಳಿಯುತ್ತದೆ.

ಮಹಾಸತಿ ಆಚರಣೆ ಎಲ್ಲಾ ಕಾಲಘಟ್ಟಗಳಲ್ಲೂ, ಎಲ್ಲಾ ಪ್ರದೇಶಗಳಲ್ಲೂ ಒಂದೇ ರೀತಿಯಲ್ಲಿ ಒಂದೇ ವರ್ಗಗಳಲ್ಲಿ ಆಚರಿಸಲ್ಪಡುತ್ತಿತ್ತೆಂದು ಹೇಳಲು ಸಾಧ್ಯವಿಲ್ಲ. ಉತ್ತರ ಭಾರತದಲ್ಲಿ ನಡೆಯುತ್ತಿದ್ದ ಮಹಾಸತಿ ಆಚರಣೆಗಳು ಬಹುಪಾಲು ರಾಜ ಮನೆತನಗಳಿಗೆ ಅಥವಾ ಕ್ಷತ್ರಿಯ ವರ್ಣಕ್ಕೆ, ಕಾಲಾನಂತರದಲ್ಲಿ ಕೇವಲ ಬ್ರಾಹ್ಮಣವರ್ಗಕ್ಕೆ ಈ ಆಚರಣೆ ಮೀಸಲಾಗಿತ್ತೆಂಬುದು ತಿಳಿಯುತ್ತದೆ. ಆದರೆ ಕರ್ನಾಟಕದ ಮಾಸ್ತಿ ಆಚರಣೆಯನ್ನು ಹಾಗೂ ಅದರ ಕುರುಹುಗಳಾದ ಮಾಸ್ತಿ ಕಲ್ಲುಗಳನ್ನು ಬಹುಪಾಲು ಶೂದ್ರವರ್ಣಕ್ಕೆ ಸೇರಿದ ಜನಾಂಗಗಳಲ್ಲಿ ಕಾಣಬಹುದಾಗಿದೆ.

ಅದರಲ್ಲೂ ರಾಜರ ಪರವಾದ ಹೋರಾಟಗಳಲ್ಲೋ, ಗೋವುಗಳ, ಸ್ತ್ರೀಯರ ರಕ್ಷಣೆಗಾಗಿಯೋ ಅಥವಾ ಊರನ್ನು ರಕ್ಷಿಸಲು ಹೋರಾಡುವಾಗ ಮಡಿದ ಪುರುಷರ ಹೆಂಡತಿಯರೇ ಸಹಗಮನ ಮಾಡಿದ ಪುರಾವೆಗಳು ಅಧಿಕ ಸಂಖ್ಯೆಯಲ್ಲಿ ಲಭಿಸುತ್ತವೆ. ಶೂದ್ರ ಜಾತಿಗಳಾದ ನಾಯಕ, ಗೊಲ್ಲ, ಗಾವುಂಡ ಮತ್ತು ಕೆಲವು ಹರಿಜನ ವರ್ಗಗಳಲ್ಲಿಯೇ ಇಂತಹ ಆಚರಣೆಗಳು ನಡೆಯುತ್ತಿದ್ದವೆಂಬುದಕ್ಕೆ ಹಲವು ದಾಖಲೆಗಳು ಮತ್ತು ಐತಿಹ್ಯಗಳು ದೊರೆಯುತ್ತವೆ. ಇದನ್ನು ಗಮನಿಸಿದಾಗ ನಮ್ಮ ಕರ್ನಾಟಕದಲ್ಲಿ ಮಾಸ್ತಿ ಆಚರಣೆಗಳಿಗೆ ಒಳಗಾಗುತ್ತಿದ್ದವರು ಕೆಳವರ್ಗದವರೇ ಆಗಿದ್ದರೆಂಬುದನ್ನು ಸಂದೇಹವಿಲ್ಲದೆ ಹೇಳಬಹುದಾಗಿದೆ.

ಮಾಸ್ತಿ ಆಚರಣೆಯನ್ನು ಕುರಿತ ಮೇಲಿನ ಎಲ್ಲಾ ಅಂಶಗಳನ್ನು ನೋಡಿದಾಗ ಈ ಆಚರಣೆಯ ಸುತ್ತ ಇರುವ ನಮ್ಮ ಜನಪದರ ನಂಬಿಕೆ ಮತ್ತು ಮನೋಭಾವಗಳಲ್ಲಿ ದ್ವಂದ್ವತೆ ಇರುವುದು ಕಂಡುಬರುತ್ತದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಪುರುಷನಿಲ್ಲದಿದ್ದರೆ ಅವಳಿಗೆ ಅಸ್ತಿತ್ವವೇ ಇಲ್ಲವೆಂಬಂತೆ ಅವಳೂ ಅವನೊಂದಿಗೇ ಸಹಗಮನ ಮಾಡಬೇಕೆಂಬ ಮನೋಭಾವವೇ ಈ ಆಚರಣೆಗೆ ಮೂಲ ಕಾರಣವಾಗಿರುವುದು ಕಂಡುಬರುತ್ತದೆ. ಆದರೆ ಇದನ್ನು ಒಪ್ಪಿಕೊಳ್ಳುವ ಮತ್ತು ವಿರೋಧಿಸುವ ಎರಡೂ ಮನೋಭಾವಗಳು ಏಕಕಾಲದಲ್ಲಿತ್ತು ಎಂಬುದು ಅರ್ಥವಾಗುತ್ತದೆ.

**ಕೊನೆ ಟಿಪ್ಪಣಿಗಳು:**

1. ಬಸವರಾಜ ಕಲ್ಗುಡಿ, (2013), ಮೈಯೇ ಸೂರು ಮನವೇ ಮಾತು, ಬೆಂಗಳೂರು: ಅಭಿನವ ಪ್ರಕಾಶನ ಪು.ಸಂ. 320.
2. ಅದೇ, ಪು.ಸಂ. 320.
3. ಅದೇ, ಪು.ಸಂ. 321
4. ಅದೇ, ಪು.ಸಂ. 323

**ಪರಾಮರ್ಶನ ಗ್ರಂಥಗಳು:**

1. ಅಣ್ಣಿಗೇರಿ ಎ.ಎಂ. ಮತ್ತು ಮೇವುಂಡಿ ಮಲ್ಲಾರಿ (ಸಂ), (1961), ಶಾಸನ ಸಾಹಿತ್ಯ ಸಂಚಯ, ಧಾರವಾಡ: ಕನ್ನಡ ಸಂಶೋಧನಾ ಸಂಸ್ಥೆ.
2. ಕಲಬುರ್ಗಿ ಎಂ.ಎಂ., (1980), ಸಮಾಧಿ, ಬಲಿದಾನ – ವೀರ ಮರಣ ಸ್ಮಾರಕಗಳು, ಬೆಂಗಳೂರು: ಐಬಿಎಚ್ ಪ್ರಕಾಶನ.
3. ಚೆನ್ನಕ್ಕ ಸಿ. ಎಲಿಗಾರ, (1990), ಶಾಸನಗಳಲ್ಲಿ ಕರ್ನಾಟಕ ಸ್ತ್ರೀ ಸಮಾಜ, ಧಾರವಾಡ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾನಿಲಯ.
4. ಚಿದಾನಂದಮೂರ್ತಿ ಎಂ., (1984), ವೀರಗಲ್ಲು ಮತ್ತು ಮಾಸ್ತಿಗಲ್ಲು, ಬೆಂಗಳೂರು: ಐಬಿಎಚ್ ಪ್ರಕಾಶನ.
5. ಚಿದಾನಂದಮೂರ್ತಿ ಎಂ., (2008), ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು: ಸಪ್ನ ಬುಕ್ ಹೌಸ್.
6. ಶೇಠ ಬಿ.ಎಸ್., (1991), ಕರ್ನಾಟಕದಲ್ಲಿ ಸತಿ ಪದ್ಧತಿ, ಬೆಳಗಾವಿ: ವೀರಶೈವ ಅಧ್ಯಯನ ಅಕಾಡೆಮಿ.
7. ಬಸವರಾಜ ಕಲ್ಗುಡಿ, (2013), ಮೈಯೇ ಸೂರು ಮನವೇ ಮಾತು, ಬೆಂಗಳೂರು: ಅಭಿನವ ಪ್ರಕಾಶನ.
8. ಜೋಶಿ ಶಂ.ಬಾ., (1939), ಕರ್ನಾಟಕ ಸಂಸ್ಕೃತಿ ಪೂರ್ವ ಪೀಠಿಕೆ, ಧಾರವಾಡ: ಸಮಾಜ ಪುಸ್ತಕಾಲಯ.